## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಕೆ.ಎನ್.ನಾಡಿಗೇರ, ಲಿಪಿಕ ಸಹಾಯಕ (ನಿವೃತ್ತ) ಮತ್ತು ಶ್ರೀ ಇಸ್ಮಾಯಿಲ್ ಎನ್. ಕುಡಚಿ, ಹೆಲ್ಪರ್ (ನಿವೃತ್ತ) ಇವರುಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರ ಸೌಲಭ್ಯ ಮಂಜೂರು ಮಾಡುವ ಬಗ್ಗೆ- ಆದೇಶ.

ಓದಲಾಗಿದೆ:-

1. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಮು.ಇಂ./ ಪಂ.ರಾ.ಇಂ.ಇ./ ಬೆಂ/ ಸಿ-9/110/ ನಿವೃತ್ತಿ/ಕನಾಸೇನಿ/247-(ಎ)/ಸೌಲಭ್ಯ/ಧಾ.ವೃ/ 2018-19/ 2979 ದಿನಾಂಕ. 10.09.2018.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಮು.ಇಂ./ ಪಂ.ರಾ.ಇಂ.ಇ./ ಬೆಂ/ ಸಿ-9/4/ ನಿವೃತ್ತಿ/ಕನಾಸೇನಿ/247-(ಎ)/ಸೌಲಭ್ಯ/ಬೆಂ.ವೃ/ 2018-19/ 2980 ದಿನಾಂಕ. 10.09.2018.
3. ಸರ್ಕಾರದ ಆದೇಶ ಸಂಖ್ಯೆ : ಆಇ 4 ಎಸ್ಆರ್ಎ 2016, ದಿನಾಂಕ 10.04.2017.

*****

ಪ್ರಸ್ತಾವನೆ :-

ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1) ಮತ್ತು (2)ರಲ್ಲಿ ಓದಲಾದ ದಿನಾಂಕ 10.09.2018ರ ಪತ್ರಗಳ ಜೊತೆ ಈ ಕೆಳಕಂಡ ನಿವೃತ್ತ ನೌಕರರ ಮೂಲ ಸೇವಾ ಪುಸ್ತಕಗಳನ್ನು ಕಳುಹಿಸುತ್ತಾ, ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರನ್ವಯ ಪಿಂಚಣಿ ಉದ್ದೇಶಕ್ಕೆ 2 ವರ್ಷಗಳ ಅರ್ಹತಾದಾಯಕ ಸೇವಾ ಸೌಲಭ್ಯವನ್ನು ನೀಡುವ ಬಗ್ಗೆ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ :-

1) ಶ್ರೀ ಕೆ.ಎನ್.ನಾಡಿಗೇರ, ಲಿಪಿಕ ಸಹಾಯಕ (ನಿವೃತ್ತ)
2) ಶ್ರೀ ಇಸ್ಮಾಯಿಲ್ ಎನ್. ಕುಡಚಿ, ಹೆಲ್ಪರ್ (ನಿವೃತ್ತ)

ಆರ್ಥಿಕ ಇಲಾಖೆಯು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 10.04.2017ರಂದು ಹೊರಡಿಸಿದ ಆದೇಶದಲ್ಲಿ ಪ್ರಾರಂಭದಲ್ಲಿ ದಿನಗೂಲಿ ಅಥವಾ ಮಿತವೇತನ ಪದವೀಧರರಾಗಿ ಕಾರ್ಯನಿರ್ವಹಿಸಿ, ತದನಂತರ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡ ನೌಕರರಿಗೂ ಸಹ ನೇರ ನೇಮಕಾತಿಯಿಂದ ನೇಮಕಗೊಂಡ ಇತರೆ ಸರ್ಕಾರಿ ನೌಕರರಿಗೆ ಅನ್ವಯವಾಗುವಂತೆ ಗರಿಷ್ಠ 2 ವರ್ಷಗಳ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಅಧಿಕ ಅರ್ಹತಾದಾಯಕ ಸೇವೆಯಾಗಿ ಪರಿಗಣಿಸಲು ಅನುಮತಿಸಲಾಗಿದೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಪರಿಶೀಲಿಸಿದೆ. ಮೇಲಿನ ನಿವೃತ್ತ ನೌಕರರ ಪೈಕಿ ಕ್ರಮ ಸಂಖ್ಯೆ (1)ರಲ್ಲಿನ ಶ್ರೀ ಕೆ.ಎನ್.ನಾಡಿಗೇರ, ಲಿಪಿಕ ಸಹಾಯಕ (ನಿವೃತ್ತ) ರವರು ಮೂಲತಃ ದಿನಗೂಲಿ ಆಧಾರದ ಮೇಲೆ ನೇಮಕಾತಿ ಹೊಂದಿದ ನೌಕರರಾಗಿದ್ದು, ಮುಖ್ಯ ಇಂಜಿನಿಯರ್, ಗ್ರಾಮೀಣಾಭಿವೃದ್ಧಿ ಮತ್ತು ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ರವರ

ದಿನಾಂಕ 22.02.2003ರ ಆದೇಶದ ಪ್ರಕಾರ ದಿನಾಂಕ 26.02.1994 ರಿಂದ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡು ಸೇವೆ ಸಲ್ಲಿಸಿ, ದಿನಾಂಕ 30.04.2014ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಸದರಿಯವರು ನಿವೃತ್ತಿ ಹೊಂದುವ ದಿನಾಂಕಕ್ಕೆ ಒಟ್ಟಾರೆ 20 ವರ್ಷ 2 ತಿಂಗಳು 3 ದಿವಸ ಅರ್ಹತಾದಾಯಕ ಸೇವೆ ಸಲ್ಲಿಸಿರುತ್ತಾರೆ.

ಅದರಂತೆ, ಮೇಲಿನ ಕ್ರಮ ಸಂಖ್ಯೆ (2)ರಲ್ಲಿನ ಶ್ರೀ ಇಸ್ಮಾಯಿಲ್ ಎನ್. ಕುಡಚಿ, ಹೆಲ್ಪರ್ (ನಿವೃತ್ತ), ರವರು ಮೂಲತಃ ದಿನಗೂಲಿ ಆಧಾರದ ಮೇಲೆ ನೇಮಕಾತಿ ಹೊಂದಿದ ನೌಕರರಾಗಿದ್ದು, ಕಾರ್ಯಪಾಲಕ ಇಂಜಿನಿಯರ್, ಮೆಕ್ಯಾನಿಲ್ ವಿಭಾಗ (ಪಿ.ಹೆಚ್.ಇ.) ಗುಲ್ಬರ್ಗಾ ಇವರ ದಿನಾಂಕ 31.01.1991ರ ಆದೇಶದ ಪ್ರಕಾರ 10.12.1991 ರಿಂದ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡು ಸೇವೆ ಸಲ್ಲಿಸಿ, ದಿನಾಂಕ 30.04.2014 ರಂದು ಸೇವೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಸದರಿಯವರು ನಿವೃತ್ತಿ ಹೊಂದುವ ದಿನಾಂಕಕ್ಕೆ ಒಟ್ಟಾರೆ 22 ವರ್ಷ 4 ತಿಂಗಳು 21 ದಿವಸ ಅರ್ಹತಾದಾಯಕ ಸೇವೆ ಸಲ್ಲಿಸಿರುತ್ತಾರೆ.

| ಕ್ರ.ಸಂ. | ಹೆಸರು ಮತ್ತು ಹುಟ್ಟಿದ ದಿನಾಂಕ | ದಿನಗೂಲಿ ನೌಕರನಾಗಿ ಕೆಲಸಕ್ಕೆ ಸೇರಿದ ದಿನಾಂಕ | ಸೇವಾ ಸಕ್ರಮಗೊಂಡ ದಿನಾಂಕ | ಸೇವೆಯಿಂದ ವಯೋನಿವೃತ್ತಿ ಹೊಂದಿದ ದಿನಾಂಕ | ನಿವೃತ್ತಿ ಹೊಂದುವ ದಿನಾಂಕಕ್ಕೆ ಸಲ್ಲಿಸಿರುವ ಒಟ್ಟು ಸೇವೆ |
|---|---|---|---|---|---|
| 1 | ಶ್ರೀ ಕೆ.ಎನ್. ನಾಡಿಗೇರ, ಲಿಪಿಕ ಸಹಾಯಕ (ನಿವೃತ್ತ) 08.04.1954. | 26.02.1984 | 26.02.1994 | 30.04.2014 | 20 ವರ್ಷ 2 ತಿಂಗಳು 3 ದಿವಸ |
| 2 | ಶ್ರೀ ಇಸ್ಮಾಯಿಲ್ ಎನ್. ಕುಡಚಿ, ಹೆಲ್ಪರ್ (ನಿವೃತ್ತ), 18.04.1954 | 01.07.1984 | 10.12.1991 | 30.04.2014 | 22 ವರ್ಷ 4 ತಿಂಗಳು 21 ದಿವಸ |

ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247 (ಎ)ರಲ್ಲಿ ಸ್ಪಷ್ಟಪಡಿಸಿರುವಂತೆ ದಿನಗೂಲಿ ಆಧಾರದ ನೌಕರರು ಸೇರಿದಂತೆ 30 ವರ್ಷಗಳ ನಂತರ ನೇಮಕಾತಿ ಹೊಂದಿದ ನೌಕರರಿಗೆ ಗರಿಷ್ಠ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ನೀಡಲು ಅವಕಾಶ ಇರುತ್ತದೆ. ಆದ್ದರಿಂದ, ಈ ಪ್ರಕರಣದಲ್ಲಿ ಸದರಿ ಇಬ್ಬರೂ ನಿವೃತ್ತ ನೌಕರರಿಗೆ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ನೀಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

<u>ಆದೇಶ ಸಂಖ್ಯೆ : ಗ್ರಾಅಪ 369 ಜಿಪಅ 2018</u>
<u>ಬೆಂಗಳೂರು, ದಿನಾಂಕ : 22.12.2018</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಸರ್ಕಾರವು ಈ ಕೆಳಕಂಡ ನಿವೃತ್ತ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು ನಿಯಮ 247(ಎ)ರ ಪ್ರಕಾರ 2 ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸೇರ್ಪಡೆ ಮಾಡಲು ಮಂಜೂರಾತಿ ನೀಡಿದೆ.

1) ಶ್ರೀ ಕೆ.ಎನ್.ನಾಡಿಗೇರ, ಲಿಪಿಕ ಸಹಾಯಕ (ನಿವೃತ್ತ)
2) ಶ್ರೀ ಇಸ್ಮಾಯಿಲ್ ಎನ್. ಕುಡಚಿ, ಹೆಲ್ಪರ್ (ನಿವೃತ್ತ)

ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಆಇ 4 ಎಸ್ಆರ್ಎ 2016, ದಿನಾಂಕ 10.04.2017ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿರವರಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶದನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ರಂಗನಗೌಡ) 22/12/2018
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು–ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು– ಶ್ರೀ ಕೆ.ಎನ್. ನಾಡಿಗೇರ, ಲಿಪಿಕ ಸಹಾಯಕ (ನಿವೃತ್ತ) ಮತ್ತು ಶ್ರೀ ಇಸ್ಮಾಯಿಲ್ ಎನ್. ಕುಡಚಿ, ಹೆಲ್ಪರ್ (ನಿವೃತ್ತ) ನೌಕರರ ಮೂಲ ಸೇವಾ ಪುಸ್ತಕಗಳನ್ನು ಇದರೊಂದಿಗೆ ಹಿಂದಿರುಗಿಸಲಾಗಿದೆ. ತಲುಪಿದ್ದಕ್ಕೆ ಸ್ವೀಕೃತಿ ನೀಡುವಂತೆ ಕೋರಿದೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ.
4. ಸಂಬಂಧಿಸಿದ ನಿವೃತ್ತ ನೌಕರರಿಗೆ.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸೇವೆಗಳು–1)
6. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಉಪ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
7. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
8. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.